### ಯಾತನಾಮಯ

ಜಲ ಪ್ರಳಯದ ಬಳಿಕ (ಬಿಎಂ ಹನೀಫ್), ಜವರಾಯನ ಬಗಲಲ್ಲೇ (ಎನ್.ಉದಯಕುಮಾರ್), ಸಾವು ನೋವುಗಳ ಹಾದಿಯಲ್ಲಿ (ಪ್ರವೀಣ ಕುಲಕರ್ಣಿ) ವರದಿಗಳನ್ನು ಓದಿ ಮನಸ್ಸು ಯಾತನಾಮಯ ಸಂಕಟದಿಂದ ಮರುಗಿತು.

-ಶೀಲಾ ಸತ್ಯೇಂದ್ರಸ್ವಾಮಿ,ಹರವಿಮಠ/ ಅಶ್ವಿನಿ ಬಿ. ಐಯ್ಯರ್,ಮಂಡ್ಯ/ ಕೋಟೀಶ್ವರ ಸೂರ್ಯ ನಾರಾಯಣರಾವ್/ ಬಣಕಾರ ರಾಜಶೇಖರ,ಹರಪನಹಳ್ಳಿ/ ರಾಜೇಂದ್ರಕುಮಾರ್,ದೊಡ್ಡಬಳ್ಳಾಪುರ/ ಡಿ.ಎಸ್.ಪಂಕಜ ಸುಬ್ರಮಣ್ಯಂ,ಬೆಂಗಳೂರು/ ಆರ್.ಮಂಜುನಾಥ,ದೇಬೂರು/ ಸತೀಶ ಶೆಟ್ಟಿಗಾರ್,ಜಪ್ತಿ/ ಬಿ.ಎಸ್.ಸೊಲ್ಲಾಪುರೆ,ಔರಾದ್




### ಹೃದಯ ಹಿಂಡಿದ ಮುಖಪುಟ

ಮುಖಪುಟವಂತೂ ಎಂಥವರ ಹೃದಯವನ್ನಾದರೂ ಹಿಂಡುವಂತಿದೆ.

-ಪ್ರತೀಕ್ಷಾ ಹೊಸಪಟ್ಟಣಕರ, ಮಾನ್ವಿ

### ಯಥಾವತ್ ಕಥೆ

'ಯಾವ ವೆಬ್‌ಸೈಟ್‌ನಲ್ಲೂ ಉತ್ತರವಿಲ್ಲ' ನೂತನ ದೋಶೆಟ್ಟಿಯವರ ಕಥೆ ಸರಳ ಭಾಷೆ ಹಾಗೂ ಉತ್ತಮ ನಿರೂಪಣೆಯೊಂದಿಗೆ ಮೂಡಿಬಂದಿದೆ. ನಗರ ಮತ್ತು ಗ್ರಾಮೀಣ ಬದುಕಿನ ಅಂತರವನ್ನು ಪರಿಚಯಿಸುವುದರೊಂದಿಗೆ ಸಂಬಂಧಗಳಲ್ಲಿನ ಕೃತಕತೆ, ಆತ್ಮೀಯತೆಯ ಅಭಾವ, ಕಂಪ್ಯೂಟರ್ ಮತ್ತು ಮೊಬೈಲ್ ಫೋನ್‌ಗಳು ನಮ್ಮ ಜೀವನದಲ್ಲಿ ಭೂತಾಕಾರವಾಗಿ ಆಕ್ರಮಣ ನಡೆಸಿರುವುದನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ.

-ಎ. ನಾಗರಾಜರಾವ್, ಬೆಂಗಳೂರು/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಅರುಣ ಕಾಳಾಮುಖಿ, ರಿಪ್ಪನ್‌ಪೇಟೆ

### ಉಷಾ ನಮ್ಮ ಹೆಮ್ಮೆ

ಕೆ.ಓಂಕಾರಮೂರ್ತಿಯವರ ಬರಹ 'ಚಿನ್ನದ ಹುಡುಗಿಯ ಕಣ್ಣೀರು' ಓದಿ ನೋವಾಯಿತು. ಇತ್ತೀಚೆಗೆ 'ಬಸವಶ್ರೀ' ಗೌರವಕ್ಕೂ ಪಾತ್ರವಾದ ಪಿ.ಟಿ. ಉಷಾಳಂತಹ ಪ್ರತಿಭೆಯನ್ನು ನಾವು ಪಡೆದಿರುವುದೇ ಹೆಮ್ಮೆ.

-ಡಾ. ಎ. ರಘುರಾಂ, ತುಮಕೂರು

### ಮಾಂತ್ರಿಕ ಗೆರೆಗಳು

ವ್ಯಂಗ್ಯ ಗೆರೆಗಳ ಮಾಂತ್ರಿಕ 'ಮಾರಿಯೋ ಮಿರಾಂಡ' (ಶ್ರೀಧರ ನಾಯಕ್) ಬಗ್ಗೆ ಓದಿ ಹೆಮ್ಮೆ ಎನಿಸಿತು. ರೇಖೆಗಳು ನೂರಾರು ಕತೆ ಹೇಳುತ್ತವೆ.

-ಕೆ.ವಿ. ಶಿವಕುಮಾರ್, ಕಾಳೀಹುಂಡಿ

### ಚಿತ್ರದ ಸೋಲಿಗೆ ಯಾರು ಕಾರಣ?

ಪ್ರೇಂಕಹಾನಿ ಸೋಲಲು ನಿರ್ದೇಶಕ ಚಂದ್ರುರವರ ವಿಪರೀತ ಆತ್ಮವಿಶ್ವಾಸ ಮತ್ತು ಕತೆಯ ಏಕತಾನತೆಯೇ ಕಾರಣ. ಆದರೆ ಚಿತ್ರಸುಧಾದಲ್ಲಿ ಅದರ ಸೋಲಿಗೂ ತನಗೂ ಸಂಬಂಧವಿಲ್ಲವೆಂಬ ನಾಯಕ ಅಜಯ್‌ರ ಮಾತು ಓದಿ ಅನಿಸಿದ್ದು– ಚಿತ್ರವೊಂದು ಗೆದ್ದರೆ ಮಾತ್ರ ಅದಕ್ಕೆ ನಾಯಕ ಜವಾಬ್ದಾರ, ಸೋತರೆ ಅವನಿಗೂ ಅದಕ್ಕೂ ಸಂಬಂಧವಿಲ್ಲ! ಇಂಥ ಭಾವನೆ ಚಿತ್ರೋದ್ಯಮದಲ್ಲಿದೆ. ಹಾಗೆ ನೋಡಿದರೆ ಹಿಂದಿನ ತಾಜ್‌ಮಹಲ್‌ನ ಗೆಲುವಿಗೆ ಅಜಯ್ ಕಾರಣರೇ? ಅವರ ಬದಲು ಬೇರೆಯವರು ಮಾಡಿದ್ದರೂ ಫಲಿತಾಂಶ ಅದೇ ಆಗಿರುತ್ತಿತ್ತಲ್ಲವೇ? ಆದರೂ ಅದರ ಕೀರ್ತಿಯನ್ನು ಇವರು ಪಡೆಯಲಿಲ್ಲವೇ?

-ನಾಗದೇವಾಡಿಗ, ಕುಂದಾಪುರ

### ಚಾರಣದ ಮಾಹಿತಿ

ಬಿ.ವಿ. ಪ್ರಕಾಶ ಅವರು ಹಿಮಾಲಯದ ಕಾಳಿಂದಿಪಾಸ್ ಆರೋಹಣದ ಎಲ್ಲಾ ಕಿರು ವಿವರಗಳೊಂದಿಗೆ ಚಾರಣವನ್ನು ವಿವರಿಸಿ, ಚಾರಣದ ಬಗ್ಗೆ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಮನಮುಟ್ಟುವ ಚಿತ್ರಣ ನೀಡಿದ್ದಾರೆ. ವರ್ಣಚಿತ್ರಗಳು ಕಣ್ಮನ ತಣಿಸಿದವು.

-ವೈ.ಎಂ. ಚಂದ್ರಶೇಖರ್, ಸಿದ್ದಾಪುರ

### ವಿಚಾರ ಲಹರಿ ಮನೋಜ್ಞ

ಪ್ರತಿಯೊಬ್ಬ ಮಾನವನ ಒಳಗೂ ಒಬ್ಬ ಗುರುವಿದ್ದು ಅವನು ಸರಿ– ತಪ್ಪುಗಳ ಬಗ್ಗೆ ಪಕ್ಷಪಾತರಹಿತ ನಿರ್ಣಯ ನೀಡುತ್ತಾನೆ ಎಂಬ ತತ್ವ ಅನುಭವಜನ್ಯವಾದದ್ದು. ಈ ಒಳಗಿನ ಸೊಲ್ಲನ್ನು ಗೌರವಿಸುವವನು ಸದಾ ಜಯಶೀಲ. ಹಾಗಾದಾಗ ನಮಗೆ ಪೊಲೀಸ್ ನ್ಯಾಯಾಲಯ ಇತ್ಯಾದಿ ಬೇಕೇ ಇಲ್ಲ. ವೈನತೇಯ ಅವರು ವಿಚಾರ ಲಹರಿಯಲ್ಲಿ ಈ ಅಂಶವನ್ನು ಮನೋಜ್ಞವಾಗಿ ತಿಳಿಸಿದ್ದಾರೆ.

### ಉಪಯುಕ್ತ

ಡಾ.ಎಂ.ಎಂ. ಪಂಡಿತಾರಾಧ್ಯ ಅವರು ಮಧುಮೇಹ ರೋಗಿಗಳಿಗೆ ನೀಡಿದ ಸಲಹೆ ಉಪಯುಕ್ತವಾಗಿತ್ತು.

-ಪ್ರಶಾಂತ ಎಸ್. ಸುವರ್ಣ, ಸಿದ್ದಕಟ್ಟೆ

### ರಿಯಲಿ ವಂಡರ್

ವಂಡರ್‌ಪುಟದಲ್ಲಿ ಗಜಗಾತ್ರದ ಕೊಂಬು ಹೊತ್ತ ಲರ್ಚ್ ಹೋರಿಯ ನೋಟ ರಿಯಲಿ ವಂಡರ್ ಆಗಿತ್ತು. ಏನೋ ಹಾರಾಡ್ತೀಯಾ? ನಿಂಗೇನು ಎರಡು ಕೊಂಬು ಇದೆಯಾ? ತಾಕತ್ ಇದ್ದರೆ ಲರ್ಚ್ ಮೇಲೆ ಸವಾರಿ ಮಾಡು ಎಂದು ಸವಾಲು ಹಾಕಬಹುದಲ್ಲವೆ?

-ಎಚ್.ಎನ್.ವಿಶ್ವನಾಥ್, ಶಿವಮೊಗ್ಗ

ಆಕರ್ಷಕ ಬಹುಮಾನಗಳನ್ನು ಗೆಲ್ಲಿರಿ

Himalaya
HERBAL HEALTHCARE




ಯಾವ ನೈಸರ್ಗಿಕ ಪದಾರ್ಥವು ನಿಮ್ಮ ತ್ವಚೆಗೆ ಬಣ್ಣ ನೀಡಿ, ತೇವಾಂಶಗೊಳಿಸುತ್ತದೆ?

ಆರೋಗ್ಯ ಜಾಗ್ರತೆ :

ಚಳಿಗಾಲದಲ್ಲಿ ನಿಮ್ಮ ತ್ವಚೆಯು ಜಲಾಂಶದಿಂದ ಕೂಡಿರಲು, ಸ್ನಾನವಾದ ತಕ್ಷಣವೇ ಮ್ಯಾಶ್ಚರೈಸಿಂಗ್ ಲೋಶನ್ ಬಳಸಿರಿ. ತ್ವಚೆಯು ತೇವಾಂಶವನ್ನು ಹಿಡಿದಿಡುವಲ್ಲಿ ಇದು ಸಹಕರಿಸುತ್ತದೆ.

ನಿಮಗಿದು ತಿಳಿದಿದೆಯೇ?

ಕ್ರ್ಯಾಬ್ ಆ್ಯಪಲ್ ಬಣ್ಣ ನೀಡಿ, ಮೃದುಗೊಳಿಸಿ, ತೇವಾಂಶಗೊಳಿಸುವಂತಹ ಆಲ್ಫಾ ಹೈಡ್ರಾಕ್ಸಿ ಆಮ್ಲಗಳನ್ನು (ಎಹೆಚ್‌ಎಗಳು) ಹೊಂದಿದೆ. ವ್ಹೀಟ್‌ಜರ್ಮ್ ಆಯಿಲ್ ವಿಟಮಿನ್ ಇ ಹೊಂದಿದೆಯಲ್ಲದೆ, ಸಮಯಕ್ಕೆ ಮೊದಲೇ ವಯಸ್ಸಾಗುವಿಕೆಯನ್ನು ತಪ್ಪಿಸುವಂತಹ ಆ್ಯಂಟಿ ಆಕ್ಸಿಡಂಟ್ ಗುಣಗಳನ್ನು ಹೊಂದಿದೆ. ಈ ಎಲ್ಲ ಪದಾರ್ಥಗಳು ಹಿಮಾಲಯ ಸೂದಿಂಗ್ ಬಾಡಿ ಲೋಶನ್‌ನಲ್ಲಿವೆ.

ನಿಮ್ಮ ಉತ್ತರವನ್ನು ಈ ವಿಳಾಸಕ್ಕೆ ಕಳುಹಿಸಿ : ಸುಧಾ, ನಂ. 75, ಎಮ್.ಜಿ. ರಸ್ತೆ, ಬೆಂಗಳೂರು – 560001.